ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಜೆ ಎಂ ಎಫ್ ಸಿ ನ್ಯಾಯಾಲಯ ಕೊಪ್ಪಳ

ಸಿ.ಸಿ.ನಂಃ 3129/2022

ಚಾಸಾಃ( 03 ) ಪ್ರಾಸಾ ( 03 )

ಸಾಕ್ಷಿಗೆ ಪ್ರಮಾಣ ಭೋದಿಸಲಾಯಿತು.

ದಿನಾಂಕಃ 09-09-2025

| | |
|---|---|
| ಸಾಕ್ಷಿದಾರರ ಹೆಸರು | ನಿಂಗಪ್ಪ |
| ತಂದೆ ಹೆಸರು | ಬಲವಂತಪ್ಪ ಎಮ್ಮಿ |
| ವಯಸ್ಸು | 45 ವರ್ಷ, |
| ಉದ್ಯೋಗ | ಹೊಲಮನೆ ಕೆಲಸ |
| ವಾಸಸ್ಥಳ | ಕವಲೂರು |

**ಮುಖ್ಯ ವಿಚಾರಣೆಃ ಸಸಅ ರವರಿಂದ:**

ನನಗೆ ಚಾಸಾ 02 ರವರ ಪರಿಚಯ ಇರುತ್ತದೆ. ಆರೋಪಿಯ ಪರಿಚಯ ಇರುವುದಿಲ್ಲ. ಈ ಪ್ರಕರಣದ ಬಗ್ಗೆ ನನಗೆ ಯಾವುದೇ ಮಾಹಿತಿ ಇರುವುದಿಲ್ಲ ಸುಮಾರು 2-3 ವರ್ಷಗಳ ಹಿಂದೆ ತನ್ನಜಮೀನಿಗೆ ಹೋಗುವಾಗ ಅಳವಂಡಿಯಲ್ಲಿ ಪೋಲಿಸರು ಒಂದು ಬಿಳಿ ಹಾಳೆಗೆ ನನ್ನ ಸಹಿ ತೆಗೆದುಕೊಂಡಿರುತ್ತಾರೆ. ಪೋಲಿಸರು ನನ್ನ ಸಮಕ್ಷಮದಲ್ಲಿ ದಾಳಿ ಮಾಡಿ ಯಾವುದೇ ಪಂಚನಾಮೆ ಮಾಡಿರುವುದಿಲ್ಲ. ಯಾವುದೇ ಮುದ್ದೆಮಾಲುಗಳನ್ನು ನನ್ನ ಸಮಕ್ಷಮ ಅಮಾನತ್ತುಗೋಳಿಸಿಕೊಂಡಿರುವುದಿಲ್ಲ. ನಾನು ಯಾವುದೇ ಮುದ್ದೆಮಾಲುಗಳನ್ನು ಗುರುತಿಸಲು ಅಗುವುದಿಲ್ಲ. ಸದರಿ ದಾಖಲಾತಿ ಸ್ಥಳಪಂಚನಾಮೆಯಾಗಿದ್ದು ಅದನ್ನು ಈಗಾಗಲೇ ನಿಪಿ 2 ಎಂದು , ಸಾಕ್ಷಿಯ ಸಹಿಯನ್ನು ನಿಪಿ-2 (ಸಿ) ಎಂದು ಗುರುತಿಸಲಾಯಿತು. ನಿಪಿ-2 ರಲ್ಲಿ ಏನು ಬರೆದಿದೆ ಎಂದು ನನಗೆ ಗೊತ್ತಿಲ್ಲ.

**(ಈ ಹಂತದಲ್ಲಿ ಸಾಕ್ಷಿದಾರ ಅಭಿಯೋಜನೆಯ ಕೇಸಿಗೆ ವಿರುದ್ಧವಾಗಿ ಸಾಕ್ಷಿ ನುಡಿದಿದ್ದಾರೆ ಅಂತ ಹಿಸಸಅ ರವರು ಈ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಅಂತ ಪರಿಗಣಿಸಿ ಪಾಟೀ ಸವಾಲು ಮಾಡಲು ಕೋರಿಕೊಂಡಿದ್ದು ಪಾಟೀಸವಾಲಿಗೆ ಅನುಮತಿ ನೀಡಲಾಗಿದೆ.)**

**ಪಾಟೀ ಸವಾಲುಃ ಸಸಅ ರವರಿಂದಃ**

ದಿಃ 02-05-2022 ರಂದು ಮ. 02.20 ಗಂಟೆಗೆ ಪೋಲಿಸರು ಠಾಣೆಗೆ ಕರೆದುಕೊಂಡು ಹೋಗಿ ಕವಲೂರು ಗ್ರಾಮದ ಕರೆಯ ಹತ್ತಿರ ಒಬ್ಬ ವ್ಯಕ್ತಿ ಅಕ್ರಮವಾಗಿ ಮದ್ಯ ಮಾರಾಟ ಮಾಡುತ್ತಿದ್ದ ಸಂಬಂಧ ಅಲ್ಲಿಗೆ ನನ್ನ ಮತ್ತು ಚಾಸಾ 02 ರವರನ್ನು ಕರೆದುಕೊಂಡು ಹೋಗಿ 90 ಎಂ ಎಲ್ ನ ಹೆಚ್ ಸಿ ವಿಸ್ಕಿ 14 ಟೆಟ್ರಾ ಪ್ಯಾಕೆಟ್ ಗಳು ಮತ್ತು 180 ಎಂ ಎಲ್ ನ ಹೆಚ್ ಸಿ ವಿಸ್ಕಿ 08 ಟೆಟ್ರಾ ಪ್ಯಾಕೆಟ್ ಗಳನ್ನು ಚಾಸಾ 1 ರವರು ನಮ್ಮ ಸಮಕ್ಷಮ

ಅಮಾನತ್ತು ಪಡಿಸಿಕೊಂಡು ಮ. 03-05 ರಿಂದ 04.05 ರ ಸಮಯದಲ್ಲಿ ನಮ್ಮ ಸಮಕ್ಷಮ ದಾಳಿ ಮಾಡಿ ಆರೋಪಿಯಿಂದ ಪಂಚನಾಮೆಯಲ್ಲಿ ತೋರಿಸಿದ ಮದ್ಯಗಳನ್ನು ಅಕ್ರಮವಾಗಿ ಮಾರಾಟ ಮಾಡುತ್ತಿದ್ದು, ನನ್ನ ಸಮಕ್ಷಮ ಪಂಚನಾಮೆ ಮಾಡಿ ಸ್ಥಳದಲ್ಲಿ ನನ್ನ ಸಹಿಯನ್ನು ಪಡೆದುಕೊಂಡಿರುವರು ಎಂದರೆ ಸರಿಯಲ್ಲ. ಈ ಪ್ರಕರಣದ ಬಗ್ಗೆ ನನಗೆ ಮಾಹಿತಿ ಇದ್ದರೂ ಸಹ ನಾನು ಆರೋಪಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಪಾಟೀ ಸವಾಲು ಆರೋಪಿತರ ಪರ ವಕೀಲರಿಂದ**

ಏನೂ ಇಲ್ಲ.

ಮರು ವಿಚಾರಣೆ ಇಲ್ಲ.

(ಬಹಿರಂಗ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)

ಓ. ಹೇ. ಕೆ ಸರಿ ಇದೆ ಎಂದು ಒಪ್ಪಿರುತ್ತಾರೆ

**ಹೆ. ಜೆ ಎಂ ಎಫ್ ಸಿ ಕೊಪ್ಪಳ.**_

ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಜೆ ಎಂ ಎಫ್ ಸಿ ನ್ಯಾಯಾಲಯ ಕೊಪ್ಪಳ

ಸಿ.ಸಿ.ನಂಃ 3129/2022

ಚಾಸಾಃ( 02 ) ಪ್ರಾಸಾ ( 02 )

ಸಾಕ್ಷಿಗೆ ಪ್ರಮಾಣ ಭೋದಿಸಲಾಯಿತು.

ದಿನಾಂಕಃ 09-09-2025

| | |
|---|---|
| ಸಾಕ್ಷಿದಾರರ ಹೆಸರು | ಪ್ರಕಾಶ |
| ತಂದೆ ಹೆಸರು | ಸಂಜೀವಪ್ಪ ಬಾರಕೇರಿ |
| ವಯಸ್ಸು | 38 ವರ್ಷ, |
| ಉದ್ಯೋಗ | ಹೊಲಮನೆ ಕೆಲಸ |
| ವಾಸಸ್ಥಳ | ಕವಲೂರು |

**ಮುಖ್ಯ ವಿಚಾರಣೆಃ ಸಸಅ ರವರಿಂದ:**

ನನಗೆ ಚಾಸಾ 03 ರವರ ಪರಿಚಯ ಇರುತ್ತದೆ. ಆರೋಪಿಯ ಪರಿಚಯ ಇರುವುದಿಲ್ಲ. ಈ ಪ್ರಕರಣದ ಬಗ್ಗೆ ನನಗೆ ಯಾವುದೇ ಮಾಹಿತಿ ಇರುವುದಿಲ್ಲ ಸುಮಾರು 2-3 ವರ್ಷಗಳ ಹಿಂದೆ ತನ್ನಜಮೀನಿಗೆ ಹೋಗುವಾಗ ಅಳವಂಡಿಯಲ್ಲಿ ಪೋಲಿಸರು ಒಂದು ಬಿಳಿ ಹಾಳೆಗೆ ನನ್ನ ಸಹಿ ತೆಗೆದುಕೊಂಡಿರುತ್ತಾರೆ. ಪೋಲಿಸರು ನನ್ನ ಸಮಕ್ಷಮದಲ್ಲಿ ದಾಳಿ ಮಾಡಿ ಯಾವುದೇ ಪಂಚನಾಮೆ ಮಾಡಿರುವುದಿಲ್ಲ. ಯಾವುದೇ ಮುದ್ದೆಮಾಲುಗಳನ್ನು ನನ್ನ ಸಮಕ್ಷಮ ಅಮಾನತ್ತುಗೋಳಿಸಿಕೊಂಡಿರುವುದಿಲ್ಲ. ನಾನು ಯಾವುದೇ ಮುದ್ದೆಮಾಲುಗಳನ್ನು ಗುರುತಿಸಲು ಅಗುವುದಿಲ್ಲ. ಸದರಿ ದಾಖಲಾತಿ ಸ್ಥಳಪಂಚನಾಮೆಯಾಗಿದ್ದು ಅದನ್ನು ಈಗಾಗಲೇ ನಿಪಿ 2 ಎಂದು , ಸಾಕ್ಷಿಯ ಸಹಿಯನ್ನು ನಿಪಿ-2 (ಬಿ) ಎಂದು ಗುರುತಿಸಲಾಯಿತು. ನಿಪಿ-2 ರಲ್ಲಿ ಏನು ಬರೆದಿದೆ ಎಂದು ನನಗೆ ಗೊತ್ತಿಲ್ಲ.

**(ಈ ಹಂತದಲ್ಲಿ ಸಾಕ್ಷಿದಾರ ಅಭಿಯೋಜನೆಯ ಕೇಸಿಗೆ ವಿರುದ್ಧವಾಗಿ ಸಾಕ್ಷಿ ನುಡಿದಿದ್ದಾರೆ ಅಂತ ಹಿಸಸಅ ರವರು ಈ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಅಂತ ಪರಿಗಣಿಸಿ ಪಾಟೀ ಸವಾಲು ಮಾಡಲು ಕೋರಿಕೊಂಡಿದ್ದು, ಪಾಟೀಸವಾಲಿಗೆ ಅನುಮತಿ ನೀಡಲಾಗಿದೆ.)**

**ಪಾಟೀ ಸವಾಲುಃ ಸಸಅ ರವರಿಂದಃ**

ದಿಃ 02-05-2022 ರಂದು ಮ. 02.20 ಗಂಟೆಗೆ ಪೋಲಿಸರು ಠಾಣೆಗೆ ಕರೆದುಕೊಂಡು ಹೋಗಿ ಕವಲೂರು ಗ್ರಾಮದ ಕರೆಯ ಹತ್ತಿರ ಒಬ್ಬ ವ್ಯಕ್ತಿ ಅಕ್ರಮವಾಗಿ ಮದ್ಯ ಮಾರಾಟ ಮಾಡುತ್ತಿದ್ದ ಸಂಬಂಧ ಅಲ್ಲಿಗೆ ನನ್ನ ಮತ್ತು ಚಾಸಾ 3 ರವರನ್ನು ಕರೆದುಕೊಂಡು ಹೋಗಿ 90 ಎಂ ಎಲ್ ನ ಹೆಚ್ ಸಿ ವಿಸ್ಕಿ 14 ಟೆಟ್ರಾ ಪ್ಯಾಕೇಟ್ ಗಳು ಮತ್ತು 180 ಎಂ ಎಲ್ ನ ಹೆಚ್ ಸಿ ವಿಸ್ಕಿ 08 ಟೆಟ್ರಾ ಪ್ಯಾಕೇಟ್ ಗಳನ್ನು ಚಾಸಾ 1 ರವರು ನಮ್ಮ ಸಮಕ್ಷಮ

ಅಮಾನತ್ತು ಪಡಿಸಿಕೊಂಡು ಮ. 03-05 ರಿಂದ 04.05 ರ ಸಮಯದಲ್ಲಿ ನಮ್ಮ ಸಮಕ್ಷಮ ದಾಳಿ ಮಾಡಿ ಆರೋಪಿಯಿಂದ ಪಂಚನಾಮೆಯಲ್ಲಿ ತೋರಿಸಿದ ಮದ್ಯಗಳನ್ನು ಅಕ್ರಮವಾಗಿ ಮಾರಾಟ ಮಾಡುತ್ತಿದ್ದು, ನನ್ನ ಸಮಕ್ಷಮ ಪಂಚನಾಮೆ ಮಾಡಿ ಸ್ಥಳದಲ್ಲಿ ನನ್ನ ಸಹಿಯನ್ನು ಪಡೆದುಕೊಂಡಿರುವರು ಎಂದರೆ ಸರಿಯಲ್ಲ. ಈ ಪ್ರಕರಣದ ಬಗ್ಗೆ ನನಗೆ ಮಾಹಿತಿ ಇದ್ದರೂ ಸಹ ನಾನು ಆರೋಪಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಪಾಟೀ ಸವಾಲು ಆರೋಪಿತರ ಪರ ವಕೀಲರಿಂದ**

ಏನೂ ಇಲ್ಲ.

ಮರು ವಿಚಾರಣೆ ಇಲ್ಲ.

(ಬಹಿರಂಗ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)

ಓ. ಹೇ. ಕೆ ಸರಿ ಇದೆ ಎಂದು ಒಪ್ಪಿರುತ್ತಾರೆ

**ಹೆ. ಜೆ ಎಂ ಎಫ್ ಸಿ ಕೊಪ್ಪಳ.**_

## ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಜೆ. ಎಂ. ಎಫ್. ಸಿ ನ್ಯಾಯಾಲಯ ಕೊಪ್ಪಳ

ಸಿ.ಸಿ.ನಂಃ 3129/2022

CW ( 01 ) PW ( 01 )

ಸಾಕ್ಷಿಗೆ ಪ್ರಮಾಣ ಭೋದಿಸಲಾಯಿತು.

ದಿನಾಂಕಃ 09-09-2025

| | |
|---|---|
| ಸಾಕ್ಷಿದಾರರ ಹೆಸರು | ಮಾರ್ತಡಪ್ಪ |
| ತಂದೆ ಹೆಸರು | ಮಾರ್ತಂಡಪ್ಪ |
| ವಯಸ್ಸು | 62 ವರ್ಷ, |
| ಉದ್ಯೋಗ | ನಿವೃತ್ತ ಪಿ ಎಸ್ ಐ |
| ವಾಸಸ್ಥಳ | ಯಲಬುರ್ಗಾ |

**ಮುಖ್ಯ ವಿಚಾರಣೆಃ ಸಸಅ ರವರಿಂದಃ**

ನಾನು ದಿಃ 26-11-2021 ರಿಂದ 28-03-2022 ಅಳವಂಡಿ ಠಾಣೆಯಲ್ಲಿ ಪಿ ಎಸ್ ಐ ಯಾಗಿ ಕಾರ್ಯ ನಿರ್ವಹಿಸಿರುತ್ತೇನೆ.

ದಿಃ 02-05-2022 ರಂದು ಮ. 02.10 ಗಂಟೆಗೆ ನಾನು ಠಾಣಾ ಪ್ರಭಾರದಲ್ಲಿದ್ದಾಗ ಕವಲೂರು ಗ್ರಾಮದ ಬಿಟ್ ಸಿಬ್ಬಂದಿ ಚಾಸಾ 6 ರವರು ನನಗೆ ದೂರವಾಣಿ ಮೂಖಾಂತರ ಕವಲೂರು ಗ್ರಾಮದ ಕರೆಯ ಹತ್ತಿರ ಒಂದು ಪಾನ್ ಬಿಡ ಅಂಗಡಿಯ ಮುಂದೆ ಸಾರ್ವಜನಿಕ ಸ್ಥಳದಲ್ಲಿ ಆರೋಪಿಯು ಅಕ್ರಮವಾಗಿ ಮಧ್ಯ ಮಾರಾಟ ಮಾಡುತ್ತಿದ್ದ ಬಗ್ಗೆ ಬಾತ್ಮಿ ಬಂದಿದ್ದ ಬಗ್ಗೆ ನನಗೆ ತಿಳಿಸಿರುತ್ತಾನೆ. ಸದರಿ ಮಾಹಿತಿಯನ್ನು ನಾನು ಇಲಾಖೆಯ ಮೆಲಾಧಿಕಾರಿಗೆ ತಿಳಿಸಿ, ವಿಶೇಷ ಕರ್ತವ್ಯದ ಮೇಲೆ ಇದ್ದ ಚಾಸಾ 4 ರಿಂದ 6 ರವರಿಗೆ ದಾಳಿಗೆ ನನ್ನೊಂದಿಗೆ ಬರಲು ಸೂಚಿಸಿದ್ದು, ಚಾಸಾ 5 ರವರಿಗೆ ಪಂಚರನ್ನು ಬರಮಾಡಿಕೊಂಡು ಬರುವಂತೆ ಹೇಳಿದ್ದು, ಅದರಂತೆ ಚಾಸಾ 2 ಮತ್ತು 3 ರವರನ್ನು ಪಂಚರನ್ನಾಗಿ ಬರಮಾಡಿಕೊಂಡು ಬಂದು ನನಗೆ ಪರಿಚಯಿಸಿದ್ದು, ಅವರಿಗೆ ದಾಳಿಗೆ ಹೋಗುವ ವಿಷಯವನ್ನು ತಿಳಿಸಿದ್ದು ಅದಕ್ಕೆ ಅವರು ಒಪ್ಪಿಕೊಂಡಿರುತ್ತಾರೆ.

ನಂತರ ಮ 02.40 ಗಂಟೆಗೆ ನಾನು ಮತ್ತು ಚಾಸಾ 2 ರಿಂದ 7 ರವರ ಜೊತೆ ಇಲಾಖೆ ಜೀಪುನಲ್ಲಿ ಠಾಣೆಯಿಂದ ಹೊರಟು ಮ. 03.00 ರ ಸುಮಾರಿಗೆ ಗುನ್ನೆಸ್ಥಳದ ಸಮೀಪ ಸುಮಾರು 100 ಅಡಿ ದೂರದಲ್ಲಿ ಜೀಪನ್ನು ನಿಲ್ಲಿಸಿ ನಾವೆಲ್ಲರೂ ಕಾಲುನಡಿಗೆಯಲ್ಲಿ ಹೋಗಿ ನಿಂತು ನೋಡಲಾಗಿ ಮ. 03.10 ನಿ. ಆರೋಪಿಯು ಮದ್ಯ ಮಾರಾಟ ಮಾಡುತ್ತಿದ್ದು ಹಾಗೂ ಖರೀದಿಸಲು ಜನರು ಸೇರಿದ್ದರು. ನಂತರ ನಾನು

ಮತ್ತು ಸಿಬ್ಬಂದಿಗಳು ದಾಳಿ ಮಾಡಿದ್ದು, ನಮ್ಮನ್ನು ನೋಡಿ ಖರೀದಿಸಲು ಬಂದ ಜನರು ಮತ್ತು ಆರೋಪಿಯು ಓಡಿ ಹೋಗಿರುತ್ತಾರೆ.

ನಂತರ ಚಸಾ 8 ರವರನ್ನು ವಿಚಾರಿಸಿದಾಗ ಆರೋಪಿಯ ಹೆಸರು ಹುಸೇನ್ ಸಾಬ್ ತಂದೇ ಪೀರ್ ಸಾಬ್ ಎಂದು ತಿಳಿದು ಬಂದಿರುತ್ತದೆ. ಅತನು ಮದ್ಯ ಮಾರಾಟ ಮಾಡಲು ಯಾವುದೇ ಪರವಾನಿಗೆಯನ್ನು ಹೊಂದಿರಲಪಿಲ್ಲ. ನಂತರ ಅತನ ಬಳಿ ಒಂದು ಚೀಲದಲ್ಲಿ ಇದ್ದ ಈ ಕೆಳಕಂಡ ಟೆಟ್ರಾ ಪ್ಯಾಕೇಟ್ ಗಳನ್ನು ಪಂಚರ ಸಮಕ್ಷಮ ಜಪ್ತಿ ಮಾಡಿ ವಶಪಡಿಸಿಕೊಂಡಿರುತ್ತೇನೆ.

| | |
|---|---|
| 1. | 90 ಎಂ ಎಲ್ ನ ಹೆಚ್ ಸಿ ವಿಸ್ಕಿ 14 ಟೆಟ್ರಾ ಪ್ಯಾಕೇಟ್ ಗಳು. |
| 2. | 180 ಎಂ ಎಲ್ ನ ಓಟಿ ವಿಸ್ಕಿ 08 ಟೆಟ್ರಾ ಪ್ಯಾಕೇಟ್ ಗಳು. |

ಈ ಮೇಲಿನ ಮದ್ಯದ ಪ್ಯಾಕೇಟ್ ಗಳನ್ನು ಆರೋಪಿಯ ಬಳಿಯಿಂದ ಪಂಚರ ಸಮಕ್ಷಮ ಜಪ್ತಿಮಾಡಿಕೊಂಡು ಮ. 03.05 ರಿಂದ 04.05 ರವರೆಗೆ ಪಂಚನಾಮೆಯನ್ನು ಜರುಗಿಸಿ ಗಣಕೀಕೃತಗೋಳಿಸಿ ನಂತರ ಠಾಣೆಗೆ ಬಂದು ಪ್ರಿಂಟ್ ನ್ನು ತೆಗೆದು ಪಂಚರ ಸಹಿ ಪಡೆದಿರುತ್ತ್ತೇನೆ. ಪಂಚನಾಮೆಯನ್ನು ಮುಗಿಸಿ ಸಂಜೆ 04.30 ಗಂಟೆಗೆ ಠಾಣೆಗೆ ಹಾಜರಾಗಿ ಚಾಸಾ 13 ರವರಿಗೆ ನನ್ನ ಗಣಕೀಕೃತ ಫಿರ್ಯಾದಿಯನ್ನು ನೀಡಿ, ಪಂಚನಾಮೆ ಮತ್ತು ಮುದ್ದೆಮಾಲುಗಳು ಹಾಗೂ ಆರೋಪಿಯ ಸಮೇತ ಅವರ ವಶಕ್ಕೆ ನೀಡಿರುತ್ತೇನೆ.

ಸಾಕ್ಷಿಯು ಫಿರ್ಯಾದಿಯನ್ನು ನೋಡಿ ಗುರುತಿಸಿದ್ದು ಸದರಿ ಫಿರ್ಯಾದಿಯನ್ನು ನಿಪಿ 1 ಎಂದು ಮತ್ತು ಅತನ ಸಹಿಯನ್ನು ನೀಪಿ 1(ಎ) ಎಂದು ಗುರುತಿಸಲಾಯಿತು. ಸಾಕ್ಷಿಯು ಪಂಚನಾಮೆಯನ್ನು ಮತ್ತು ಸಹಿಯನ್ನು ನೋಡಿ ಗುರುತಿಸಿದ್ದು ಸದರಿ ಪಂಚನಾಮೆಯನ್ನು ನಿಪಿ 2 ಮತ್ತು ಸಹಿಯನ್ನು ನಿಪಿ 2(ಎ) ಎಂದು ಗುರುತಿಸಲಾಯಿತು. ಸಾಕ್ಷಿಯು ತಾನು ಪಂಚರಿಗೆ ನೀಡಿದ ಎರಡು ನೋಟಿಸ್ ಗಳನ್ನು ನೋಡಿ ಗುರುತಿಸಿದ್ದು ಅವುಗಳನ್ನು ನಿಪಿ 3 ಮತ್ತು 4 ಎಂದು ಗುರುತಿಸಲಾಯಿತು. ಸಾಕ್ಷಿಯು ಈ ಪ್ರಕರಣದ ಮುದ್ದೆಮಾಲುಗಳನ್ನು ನೋಡಿ ಗುರುತಿಸಿದ್ದು ಅವುಗಳನ್ನು ಕ್ರಮವಾಗಿ ಮು.ಮಾ. 1 ರಿಂದ 23 ಎಂದು ಗುರುತಿಸಲಾಯಿತು. ಸಾಕ್ಷಿಯು ನ್ಯಾಯಾಲಯದ ಮುಂದೆ ಇರುವ ಆರೋಪಿಯನ್ನು ನೋಡಿ ಸದರಿ ಆರೋಪಿಯು ಅಕ್ರಮವಾಗಿ ಮದ್ಯ ಮಾರಾಟ ಮಾಡುತ್ತಿದ್ದನು ಎಂದು ಗುರುತಿಸಿರುತ್ತಾರೆ.

**ಪಾಟೀ ಸವಾಲುಃ ಆರೋಪಿತರ ಪರ ವಕೀಲರಿಂದಃ**

ಸದರಿ ದಿನದಂದು ಠಾಣಾಧಿಕಾರಿ ಚಾಸಾ 13 ರವರು ಇದ್ದರು. ಚಾಸಾ 6 ರವರು ತಮಗೆ ಬಂದ ಮಾಹಿತಿಯನ್ನು ನನಗೆ ಮೌಖಿಕವಾಗಿ ತಿಳಿಸಿರುತ್ತಾರೆ. ಪಂಚರಿಗೆ ನಾನೆ ದಾಳಿಯ ಕುರಿತು 10 ದಿ. ಹಿತಿಯನ್ನು ನೀಡಿರುತ್ತೇನೆ. ನಾವು ಕವಲೂರು ಗ್ರಾಮಕ್ಕೆ ಅಳವಂಡಿ ಗ್ರಾಮದ ಮೂಲಕ ಹೋಗಿದ್ದು, ತಲುಪಲು 10 ನಿಮಿಷ ಬೇಕಾಗುತ್ತದೆ. ನಾವು ಒಟ್ಟು 6 ಜನ ದಾಳಿಗೆ ಹೋಗಿದ್ದೆವು. ಘಟನ ಸ್ಥಳಕ್ಕೆ ಹೋಗಲು ಯಾವುದೇ ಊರುಗಳು ಬರುವುದಿಲ್ಲ, ಅಳವಂಡಿ ಗ್ರಾಮ ನಂತರ ಕವಲೂರು ಬರುತ್ತದೆ. ಘಟನಸ್ಥಳ ನಾವುದಿಲ್ಲಿಸಿದ ವಾಹನದಿಂದ ನೇರವಾಗಿ ಕಾಣುತ್ತಿರಲ್ಲಿ ಗುನ್ನಜಾಗದಲ್ಲಿ ಇದ್ದ ಪಾನ್ ಶಾಪ್ ಗೆ ಯಾವುದೇ ಹೆಸರು ಇರಲಿಲ್ಲ. ಗುನ್ನಜಾಗದಲ್ಲಿ ಸಾಕಷ್ಟು ಜನ ಸಂದಣಿ ಇರುತ್ತದೆ ಎಂದರೆ ಸರಿ. ಅಲ್ಲಿ ಯಾರು ಏನು ಮಾಡುತ್ತಿದ್ದರು ಎಂದು ಹೇಳಲು ಅಗುವುದಿಲ್ಲ ಎಂದರೆ ಸರಿ. ಪಂಚನಾಮೆಯನ್ನು ಗವಿಸಿದ್ದಪ್ಪರವರ ಮಾಲಕ ಗಣಕೀಕೃತ ಪಡಿಸಲಾಗಿದೆ, ಅದರೇ ಅವರ ಸಹಿಯನ್ನು ತೆಗೆದುಕೊಂಡಿರುವುದಿಲ್ಲ. ಯಾವುದೇ ಸಾರ್ವಜನಿಕರ ಹೇಳಿಕೆಗಳನ್ನು ನಾನು ಪಡೆದಿರುವುದಿಲ್ಲ. ಮುದ್ದೆಮಲು ಅರೋಪಿ ಏಲ್ಲಿಂದ ತಂದಿರುತ್ತಾರೆ ಎಂದು ನಾನು ಕೇಳಿರುವುದಿಲ್ಲ. ಪಂಚನಾಮೆಗೆ ನಾನು ಮತುತ ಇಬ್ಬರು ಪಂಚರು ಸಹಿ ಮಾಡಿರುತ್ತೇವೆ. ಆರೋಪಿ ಸ್ಥಳದಲ್ಲಿ ಇರಲಿಲ್ಲ ಎಂದರೆ ಸರಿಯಲ್ಲ. ಆರೋಪಿಯಿಂದ ಯಾವುದೇ ಮುದ್ದೆಮಾಲುಗಳನ್ನು ವಶಪಡಿಸಿಕೊಂಡಿಲ್ಲ ಎಂದರೆ ಸರಿಯಲ್ಲ.

ಪ್ರಕರಣಕ್ಕೂ ಆರೋಪಿಗೂ ಯಾವುದೇ ಸಂಬಂಧವಿಲ್ಲ ಎಂದರೆ ಸರಿಯಲ್ಲ. ಸ್ಥಳದಲ್ಲಿ ಯಾವುದೇ ಪಂಚನಾಮೆ ಮಾಡಿಲ್ಲ ಎಂದರೆ ಸರಿಯಲ್ಲ. ಪಂಚನಾಮೆಯನ್ನು ಠಾಣೆಯಲ್ಲಿ ಬರೆದಿದ್ದೇವೆ ಎಂದರೆ ಸರಿಯಲ್ಲ. ಇಲಾಖೆ ಅಂಕಿ ಅಂಶಗೋಸ್ಕರ ಸುಳ್ಳು ಕೇಸು ದಾಖಲಿಸಿ, ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ನಾನು ಹೇಳಿದಂತೆ ರಾಸಾಯನಿಕ ಪರೀಕ್ಷೆಗೋಸ್ಕರ ಸ್ಥಳದಲ್ಲಿ ಯಾವುದೇ ಬಾಟಲಿಗಳನ್ನು ಸೀಲ್ ಮಾಡಿರುವುದಿಲ್ಲ ಎಂದರೆ ಸರಿಯಲ್ಲ. ಆರೋಪಿಗೂ ಮುಮಾಗಳಿಗೂ ಯಾವುದೇ ರೀತಿಯ ಸಂಬಂಧ ಇಲ್ಲ ಎಂದರೆ ಸರಿಯಲ್ಲ.

**ಮರು ವಿಚಾರಣೆ ಇಲ್ಲ.**

**(ಬಹಿರಂಗ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)**

ಓ. ಹೇ. ಕೆ ಸರಿ ಇದೆ ಎಂದು ಒಪ್ಪಿರುತ್ತಾರೆ

**ಹೆ. ಜೆ ಎಂ ಎಫ್ ಸಿ ಕೊಪ್ಪಳ.**